National
Kannada
19.10.2025: 1310hrs
ಆಕಾಶವಾಣಿ, ಬೆಂಗಳೂರು

# ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಬಿಹಾರ ವಿಧಾನಸಭಾ ಚುನಾವಣೆ: ಮೊದಲ ಹಂತದ ನಾಮಪತ್ರ ಸಲ್ಲಿಕೆ ದಿನಾಂಕ ಮುಗಿದರೂ ಮಹಾಘಟಬಂಧನದಲ್ಲಿ ಮೂಡದ ಒಮ್ಮತ

೨. ದೀಪೋತ್ಸವಕ್ಕೆ ಸಜ್ಜಾದ ಅಯೋಧ್ಯೆ: ಬೆಳಗಲಿವೆ ೨೬ ಲಕ್ಷಕ್ಕೂ ಹೆಚ್ಚು ಹಣತೆಗಳು

೩. ಕದನ ವಿರಾಮಕ್ಕೆ ಅಫ್ಘಾನಿಸ್ತಾನ-ಪಾಕಿಸ್ತಾನ ಸಮ್ಮತಿ

೪. ಏಕದಿನ ಕ್ರಿಕೆಟ್: ಭಾರತ-ಆಸ್ಟ್ರೇಲಿಯಾ ನಡುವಿನ ಮೊದಲ ಪಂದ್ಯಕ್ಕೆ ಮಳೆ ಅಡ್ಡಿ

***************

ಬಿಹಾರದಲ್ಲಿ, ವಿಧಾನಸಭಾ ಚುನಾವಣೆಗೂ ಮುನ್ನ ಮಹಾಘಟಬಂಧನದ ಪಕ್ಷಗಳ ನಡುವಿನ ಬಿರುಕು ಹೆಚ್ಚಿದೆ. ರಾಜ್ಯದಲ್ಲಿ ಎರಡು ಹಂತದ ವಿಧಾನಸಭಾ ಚುನಾವಣೆಯ ಮೊದಲ ಹಂತದ ನಾಮಪತ್ರ ಸಲ್ಲಿಕೆ ಶುಕ್ರವಾರ ಮುಕ್ತಾಯಗೊಂಡಿದ್ದರೂ ಮಹಾಘಟಬಂಧನ, ತನ್ನ ಸ್ಥಾನ ಹಂಚಿಕೆಯನ್ನು ಘೋಷಿಸಲು ವಿಫಲವಾಗಿದೆ. ಇದರ ಪರಿಣಾಮವಾಗಿ, ಮೊದಲ ಹಂತದಲ್ಲಿ ಚುನಾವಣೆ ಇರುವ ಹಲವಾರು ಕ್ಷೇತ್ರಗಳಲ್ಲಿ ಕಾಂಗ್ರೆಸ್, ಆರ್‌ಜೆಡಿ ಮತ್ತು ಎಡ ಪಕ್ಷಗಳ ಅಭ್ಯರ್ಥಿಗಳು ಪರಸ್ಪರ ಸ್ಪರ್ಧಿಸುತ್ತಿದ್ದಾರೆ. ಬಿಕ್ಕಟ್ಟನ್ನು ಪರಿಹರಿಸುವಂತೆ ಆರ್‌ಜೆಡಿ ನಾಯಕ ಮತ್ತು ಮಹಾಘಟಬಂಧನ ಚುನಾವಣಾ ಸಮನ್ವಯ ಸಮಿತಿ ಅಧ್ಯಕ್ಷ ತೇಜಸ್ವಿ ಪ್ರಸಾದ್ ಯಾದವ್ ಅವರನ್ನು ಕಾಂಗ್ರೆಸ್ ಒತ್ತಾಯಿಸಿದೆ. ಭಿನ್ನಾಭಿಪ್ರಾಯದ ನಡುವೆ, ಕಾಂಗ್ರೆಸ್ ನಿನ್ನೆ ರಾತ್ರಿ ಐದು ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಬಿಡುಗಡೆ ಮಾಡಿತು. ಆರು ಸ್ಥಾನಗಳಲ್ಲಿ ಮಹಾಘಟಬಂಧನದ ಅಭ್ಯರ್ಥಿಗಳ ವಿರುದ್ಧ ಸ್ಪರ್ಧಿಸುವುದಾಗಿ ಜಾರ್ಖಂಡ್ ಮುಕ್ತಿ ಮೋರ್ಚಾ ಘೋಷಿಸಿದೆ.

***************

ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ಇಂದು ಸಂಜೆ ವಾರ್ಷಿಕ ದೀಪೋತ್ಸವದ ಒಂಬತ್ತನೇ ಆವೃತ್ತಿಗೆ ವೇದಿಕೆ ಸಜ್ಜಾಗಿದೆ. ಕಳೆದ ವರ್ಷದ ದಾಖಲೆಯನ್ನು ಮುರಿಯಲು ಭವ್ಯ ಸಿದ್ಧತೆಗಳು ನಡೆಯುತ್ತಿವೆ. ಅಯೋಧ್ಯೆ ನಗರದಾದ್ಯಂತ ೨೬ ಲಕ್ಷಕ್ಕೂ ಹೆಚ್ಚು ದೀಪಗಳನ್ನು ಬೆಳಗಿಸಲಾಗುತ್ತದೆ. ಈ ವರ್ಷ,

ರಾಮ್ ಕಿ ಪೌಡಿ ಉದ್ದಕ್ಕೂ ೫೬ ಘಾಟ್‌ಗಳಲ್ಲಿ ದಾಖಲೆಯ ೨೬ ಲಕ್ಷ ೧೧ ಸಾವಿರ ೧೦೧ ಮಣ್ಣಿನ ಹಣತೆಗಳು ಬೆಳಗಲಿವೆ. ಪವಿತ್ರ ಸರಯು ನದಿಯ ದಡದಲ್ಲಿ ಈ ದೀಪಗಳ ಪ್ರಕಾಶಮಾನವಾದ ಬೆಳಕು, ಜಾಗತಿಕ ವೇದಿಕೆಯಲ್ಲಿ ಅಯೋಧ್ಯೆಯ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಭವ್ಯತೆಯನ್ನು ಪ್ರದರ್ಶಿಸುತ್ತದೆ. ಇದೇ ವೇಳೆ ಇಂದು ಸಂಜೆ ಸರಯು ಆರತಿಯನ್ನು ಸಹ ಆಯೋಜಿಸಲಾಗಿದೆ.

***************

ಚಂದ್ರಯಾನ-೨ ತನ್ನ ವೈಜ್ಞಾನಿಕ ಉಪಕರಣಗಳನ್ನು ಬಳಸಿಕೊಂಡು, ಸೂರ್ಯನಿಂದ ಬರುವ ಕರೋನಲ್ ಮಾಸ್ ಎಜೆಕ್ಷನ್‌ಗಳ ಪರಿಣಾಮಗಳ ಮೊದಲ ವೀಕ್ಷಣೆಯನ್ನು ಮಾಡಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ-ಇಸ್ರೋ ತಿಳಿಸಿದೆ.

ಈ ವೀಕ್ಷಣೆಯು ಚಂದ್ರನ ಬಾಹ್ಯಗೋಳ, ಚಂದ್ರನ ತೆಳುವಾದ ವಾತಾವರಣ ಮತ್ತು ಅದರ ಮೇಲ್ಮೈಯಲ್ಲಿ ಬಾಹ್ಯಾಕಾಶ ಹವಾಮಾನದ ಪ್ರಭಾವವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ ಎಂದು ಇಸ್ರೋ ಹೇಳಿದೆ. ೨೦೧೯ ರ ಜುಲೈ ೨೨ ರಂದು ಶ್ರೀಹರಿಕೋಟಾದಿಂದ ಜಿಎಸ್‌ಎಲ್‌ವಿ ರಾಕೆಟ್ ಬಳಸಿ ಉಡಾವಣೆಯಾದ ಚಂದ್ರಯಾನ-೨, ಎಂಟು ಪ್ರಾಯೋಗಿಕ ಪೇಲೋಡ್‌ಗಳನ್ನು ಹೊತ್ತೊಯ್ದಿತು. ೨೦೧೯ ರ ಆಗಸ್ಟ್ ೨೦ ರಂದು, ಚಂದ್ರಯಾನ-೨ ಅನ್ನು ಚಂದ್ರನ ಸುತ್ತಲಿನ ದೀರ್ಘವೃತ್ತದ ಕಕ್ಷೆಗೆ ಯಶಸ್ವಿಯಾಗಿ ಸೇರಿಸಲಾಯಿತು. ೨೦೧೯ರ ಸೆಪ್ಟೆಂಬರ್ ೭ ರಂದು, ವಿಕ್ರಮ್ ಲ್ಯಾಂಡರ್‌ನೊಂದಿಗಿನ ಸಂಪರ್ಕವು ನಷ್ಟವಾಗಿದ್ದರೂ, ಆರ್ಬಿಟರ್ ಸಂಪೂರ್ಣವಾಗಿ ಕಾರ್ಯನಿರ್ವಹಿಸುತ್ತಿದ್ದು, ಚಂದ್ರನ ಸುತ್ತ ತನ್ನ ಕಕ್ಷೆಯಲ್ಲಿ ತಿರುಗುತ್ತಿದೆ.

***************

ಹಲವಾರು ದಿನಗಳ ಗಡಿಯಾಚೆಗಿನ ದಾಳಿಗಳ ನಂತರ ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನ ತಕ್ಷಣದ ಕದನ ವಿರಾಮಕ್ಕೆ ಒಪ್ಪಿಕೊಂಡಿವೆ ಎಂದು ಖತಾರ್ ವಿದೇಶಾಂಗ ಸಚಿವಾಲಯ ಘೋಷಣೆ ಮಾಡಿದೆ. ದೋಹಾದಲ್ಲಿ ಖತಾರ್ ಮತ್ತು ಟರ್ಕಿಯೆ ಮಧ್ಯಸ್ಥಿಕೆಯಲ್ಲಿ ನಡೆದ ಮಾತುಕತೆಯ ಸಂದರ್ಭದಲ್ಲಿ ಎರಡೂ ದೇಶಗಳ ನಡುವೆ ಈ ಒಪ್ಪಂದಕ್ಕೆ ಬರಲಾಯಿತು. ಮಾತುಕತೆಯ ಸಮಯದಲ್ಲಿ, ತಕ್ಷಣದ ಕದನ ವಿರಾಮಕ್ಕೆ ಹಾಗೂ ಎರಡೂ ದೇಶಗಳ ನಡುವೆ ಶಾಶ್ವತ ಶಾಂತಿ ಮತ್ತು ಸ್ಥಿರತೆಯನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಹೊಂದಿರುವ ಕಾರ್ಯವಿಧಾನಗಳನ್ನು ರಚಿಸಲು ಅನುಸರಣಾ ಸಭೆಗಳನ್ನು ನಡೆಸಲು ಎರಡೂ ಕಡೆಯವರು ಒಪ್ಪಿಕೊಂಡಿದ್ದಾರೆ ಎಂದು ಕತಾರ್ ವಿದೇಶಾಂಗ ಸಚಿವಾಲಯ ತಿಳಿಸಿದೆ. ಪಾಕಿಸ್ತಾನದ ನಿಯೋಗದಲ್ಲಿ ರಕ್ಷಣಾ ಸಚಿವ ಖವಾಜಾ ಆಸಿಫ್ ಮತ್ತು ಗುಪ್ತಚರ ಮುಖ್ಯಸ್ಥ ಜನರಲ್ ಅಸಿಮ್ ಮಲಿಕ್ ಇದ್ದರು. ಅಫ್ಘಾನಿಸ್ತಾನವನ್ನು ರಕ್ಷಣಾ ಸಚಿವ

ಮೊಹಮ್ಮದ್ ಯಾಕೂಬ್ ಪ್ರತಿನಿಧಿಸಿದರು. ೪೮ ಗಂಟೆಗಳ ಕದನ ವಿರಾಮವನ್ನು ಪಾಕಿಸ್ತಾನ ಉಲ್ಲಂಘಿಸಿದೆ ಎಂದು ಅಫ್ಘಾನಿಸ್ತಾನ ಈ ಹಿಂದೆ ಆರೋಪಿಸಿತ್ತು. ಈ ಸಮಯದಲ್ಲಿ ಎರಡೂ ಕಡೆಗಳಲ್ಲಿ ಅನೇಕ ಸೈನಿಕರು ಮತ್ತು ನಾಗರಿಕರು ಮೃತಪಟ್ಟರು. ಅಫ್ಘಾನಿಸ್ತಾನದ ಪಕ್ತಿಕಾ ಪ್ರಾಂತ್ಯದ ಮೇಲೆ ಪಾಕಿಸ್ತಾನ ನಡೆಸಿದ ದಾಳಿಯಲ್ಲಿ ಮೂವರು ಕ್ರಿಕೆಟಿಗರು ಸೇರಿದಂತೆ ಕನಿಷ್ಠ ೧೭ ಜನರು ಸಾವನ್ನಪ್ಪಿದ್ದರು.

***************

ಪೊಲೀಸ್ ಸ್ಮರಣಾರ್ಥ ದಿನದಂದು ಮಂಗಳವಾರ ನವದೆಹಲಿಯ ರಾಷ್ಟ್ರೀಯ ಪೊಲೀಸ್ ಸ್ಮಾರಕದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಪೊಲೀಸ್ ಹುತಾತ್ಮರಿಗೆ ಗೌರವ ಸಲ್ಲಿಸಲಿದ್ದಾರೆ. ಈ ದಿನವು ೧೯೫೯ ರ ಅಕ್ಟೋಬರ್ ೨೧ ರಂದು ಲಡಾಖ್‌ನಲ್ಲಿ ಶಸ್ತ್ರಸಜ್ಜಿತ ಚೀನಾ ಪಡೆಗಳಿಂದ ನಡೆದ ದಾಳಿಯಲ್ಲಿ ಹುತಾತ್ಮರಾದ ಹತ್ತು ವೀರ ಪೊಲೀಸರ ತ್ಯಾಗವನ್ನು ಸೂಚಿಸುತ್ತದೆ. ಅಂದಿನಿಂದ, ಈ ದಿನವನ್ನು ವಾರ್ಷಿಕವಾಗಿ ಪೊಲೀಸ್ ಸ್ಮರಣಾರ್ಥ ದಿನವೆಂದು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳು ಮತ್ತು ದೆಹಲಿ ಪೊಲೀಸರು ಜಂಟಿಯಾಗಿ ಪಥಸಂಚಲನ ನಡೆಸುತ್ತಾರೆ.

***************

ನವದೆಹಲಿ ರೈಲು ನಿಲ್ದಾಣದಲ್ಲಿ ನಿರ್ಮಿಸಲಾದ ಹೋಲ್ಡಿಂಗ್ ಪ್ರದೇಶವು ಪ್ರಯಾಣಿಕರ ಅನುಭವವನ್ನು ಗಮನಾರ್ಹವಾಗಿ ಸುಧಾರಿಸುತ್ತಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ನವದೆಹಲಿ ರೈಲು ನಿಲ್ದಾಣದಲ್ಲಿ ಹಬ್ಬದ ದಟ್ಟಣೆಯ ಸಮಯದಲ್ಲಿ ಜನಸಂದಣಿ ನಿರ್ವಹಣೆಯನ್ನು ಸಚಿವರು ಪರಿಶೀಲಿಸಿದರು. ಪ್ರಯಾಣಿಕರ ಸೌಕರ್ಯ ಕೇಂದ್ರದ ಭಾಗವಾಗಿರುವ ಹೋಲ್ಡಿಂಗ್ ಪ್ರದೇಶವು ಹಲವಾರು ಟಿಕೆಟ್ ಕೌಂಟರ್‌ಗಳು ಮತ್ತು ಶೌಚಾಲಯಗಳನ್ನು ಒಳಗೊಂಡಿದ್ದು, ಸುಮಾರು ೭೫ ಸಾವಿರ ಜನರು ಇದ್ದರೂ ಸಹ ಸುಗಮ ಪ್ರಯಾಣಿಕರ ಸಂಚಾರಕ್ಕೆ ಅನುವು ಮಾಡಿಕೊಡುತ್ತದೆ ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು. ಭಾರೀ ದಟ್ಟಣೆಯ ಹೊರತಾಗಿಯೂ, ಸುಗಮ ಕಾರ್ಯಾಚರಣೆ ಮತ್ತು ಪ್ರಯಾಣಿಕರ ಅನುಕೂಲವನ್ನು ಖಚಿತಪಡಿಸಿಕೊಳ್ಳಲು ರೈಲ್ವೆ ಸಿಬ್ಬಂದಿ ದಿನದ ೨೪ ಗಂಟೆ ಕೆಲಸ ಮಾಡುತ್ತಿದ್ದಾರೆ. ಹಬ್ಬದ ಬೇಡಿಕೆಯನ್ನು ನಿರ್ವಹಿಸಲು ದೇಶಾದ್ಯಂತ ಸುಮಾರು ೧೨ ಸಾವಿರ ವಿಶೇಷ ರೈಲುಗಳನ್ನು ಓಡಿಸಲಾಗುತ್ತಿದೆ ಎಂದು ಅವರು  ಮಾಹಿತಿ ನೀಡಿದರು. ಇದೇ ವೇಳೆ ಸಚಿವರು ನಿಯಂತ್ರಣ ಕೊಠಡಿಗೆ ಭೇಟಿ ನೀಡಿ, ಅಲ್ಲಿಂದ ನಿಲ್ದಾಣದಾದ್ಯಂತ ಸ್ಥಾಪಿಸಲಾದ ಸಿಸಿಟಿವಿ ಕ್ಯಾಮೆರಾಗಳ ಸಹಾಯದಿಂದ ಭದ್ರತಾ ಮೇಲ್ವಿಚಾರಣೆ ನಡೆಸಿದರು.

***************

ಭಾರತೀಯ ರೈಲ್ವೆ ಕಾರ್ಯಾಚರಣೆಗೆ ಸಂಬಂಧಿಸಿದಂತೆ ತಪ್ಪುದಾರಿಗೆಳೆಯುವ ವಿಡಿಯೋಗಳನ್ನು ಹಂಚಿಕೊಳ್ಳುವ ಸಾಮಾಜಿಕ ಮಾಧ್ಯಮ ಖಾತೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ರೈಲ್ವೆ ಸಚಿವಾಲಯ ನಿರ್ಧರಿಸಿದೆ. ಈ ಹಬ್ಬದ ಸಮಯದಲ್ಲಿ, ಕೆಲವು ಸಾಮಾಜಿಕ ಮಾಧ್ಯಮ ಖಾತೆಗಳು ಹಳೆಯ ಅಥವಾ ತಪ್ಪುದಾರಿಗೆಳೆಯುವ ವಿಡಿಯೋಗಳನ್ನು ಪ್ರಸಾರ ಮಾಡುತ್ತಿವೆ. ಇದು ಪ್ರಯಾಣಿಕರಲ್ಲಿ ಗೊಂದಲ ಉಂಟುಮಾಡುತ್ತಿದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ. ಪ್ರಯಾಣಿಕರಲ್ಲಿ ಅನಗತ್ಯ ಭೀತಿಯನ್ನು ಉಂಟುಮಾಡಿದ ಹಳೆಯ ಅಥವಾ ತಪ್ಪುದಾರಿಗೆಳೆಯುವ ವಿಡಿಯೊಗಳನ್ನು ಪ್ರಸಾರ ಮಾಡುವ ೨೦ ಕ್ಕೂ ಹೆಚ್ಚು ಸಾಮಾಜಿಕ ಮಾಧ್ಯಮ ಖಾತೆಗಳನ್ನು ಅಧಿಕಾರಿಗಳು ಗುರುತಿಸಿದ್ದಾರೆ. ರೈಲ್ವೆ ಆಡಳಿತ, ಈ ಖಾತೆಗಳ ವಿರುದ್ಧ ಎಫ್ಐಆರ್‌ಗಳನ್ನು ದಾಖಲಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ.

***************

ಆಸ್ಟ್ರೇಲಿಯಾದ ಪರ್ತ್‌ನಲ್ಲಿ ನಡೆಯುತ್ತಿರುವ ಮೂರು ಪಂದ್ಯಗಳ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿಂದು ಭಾರತ-ಆಸ್ಟ್ರೇಲಿಯಾ ಮುಖಾಮುಖಿಯಾಗಿವೆ. ಟಾಸ್ ಗೆದ್ದ ಆಸ್ಟ್ರೇಲಿಯಾ ಬೌಲಿಂಗ್ ಆಯ್ಕೆ ಮಾಡಿಕೊಂಡಿದೆ. ಮೊದಲು ಬ್ಯಾಟಿಂಗ್ ಮಾಡುತ್ತಿರುವ ಭಾರತ ತಂಡ, ಇತ್ತೀಚಿನ ವರದಿಯಂತೆ **16.4/14.3** ಓವರ್‌ಗಳಲ್ಲಿ **4/4** ವಿಕೆಟ್ ನಷ್ಟಕ್ಕೆ **52/46** ರನ್ ಮಾಡಿ ಆಡುತ್ತಿದೆ.

ಮಳೆ ಕಾರಣ ಪಂದ್ಯವನ್ನು **32** ಓವರ್‌ಗಳಿಗೆ ಸೀಮಿತಗೊಳಿಸಲಾಗಿದೆ.

***************

ಮಧ್ಯಪ್ರದೇಶದ ಇಂದೋರ್‌ನ ಹೋಳ್ಕರ್ ಕ್ರೀಡಾಂಗಣದಲ್ಲಿ ಇಂದು ನಡೆಯುವ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ಭಾರತ ಇಂದು ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ. ಪಂದ್ಯ ಮಧ್ಯಾಹ್ನ ೩ ಗಂಟೆಗೆ ಪ್ರಾರಂಭವಾಗಲಿದೆ.

***************

ಗುವಾಹಟಿಯಲ್ಲಿ ನಡೆಯುತ್ತಿರುವ ಬಿಡಬ್ಲ್ಯೂ ಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನ ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ಇಂದು ಭಾರತದ ತನ್ವಿ ಶರ್ಮಾ, ಥೈಲ್ಯಾಂಡ್‌ನ ಅನ್ಯಪತ್ ಫಿಚಿತ್‌ಪ್ರೀಚಾಸಕ್ ಅವರನ್ನು ಎದುರಿಸಲಿದ್ದಾರೆ. ಈ ಹಿಂದೆ ಮಹಿಳಾ ಶಟ್ಲರ್‌ಗಳಾದ ಅಪರ್ಣಾ ಪೊಪಟ್, ಸೈನಾ ನೆಹ್ವಾಲ್ ಮತ್ತು ಪುರುಷ ಮಹಿಳಾ ಶಟ್ಲರ್‌ಗಳಾದ ಸಿರಿಲ್ ವರ್ಮಾ ಮತ್ತು ಶಂಕರ್ ಮುತ್ತುಸಾಮಿ ವಿಶ್ವ ಜೂನಿಯರ್ ಫೈನಲ್ ತಲುಪಿದ್ದರು.